ಬೀದರ್, ಗುಲ್ಬರ್ಗ, ಬಿಜಾಪುರ ಆ ಕಡೆಗಳಲ್ಲಿ ಲೇಡಿ ಡಾಕ್ಟರ್ ಮುಖಿ ನೋಡದೆ ಇರುವ ಆಸ್ಪತ್ರೆಗಳು ಇವೆ. ಆ ಕಡೆಗೆ ಮಾಡಿಕೊಟ್ಟು ನಂತರ ಈ ಕಡೆಗೂ ಮಾಡಿಕೊಡುತ್ತೇವೆ. ಇಪ್ಪೊತ್ತು ಶಿವಮೊಗ್ಗ ಜಿಲ್ಲೆಯಲ್ಲಿ ನಾಲ್ಕು ಜನ ಲೇಡಿ ಡಾಕ್ಟರುಗಳು ಬೇಕು, ಪುರುಷ ವೈದ್ಯರು ಬೇಕು ಅದನ್ನು ಭರ್ತಿ ಮಾಡುತ್ತೇವೆ. ಆದರೆ ಎಲ್ಲವನ್ನೂ ಒಂದೇ ಸಾರಿ ಭರ್ತಿ ಮಾಡುತ್ತೇವೆಂದು ಹೇಳಲಿಕ್ಕೆ ಆಗುವುದಿಲ್ಲ. ಬಹಳ ಹಿಂದುಳಿದ ಪ್ರದೇಶಗಳಿಗೆ ಈ ವೈದ್ಯಕೀಯ ಸೌಲಭ್ಯವನ್ನು ಕೊಡಬೇಕಾಗುತ್ತದೆ. ಆದುದರಿಂದ ಮಾನ್ಯ ಸದಸ್ಯರು ಈ ಬಗ್ಗೆ ಸಹಕರಿಸಬೇಕೆಂದು ಹೇಳುತ್ತೇನೆ.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ.—ನನ್ನ ಕ್ಷೇತ್ರ ಬಹಳ ಹಿಂದುಳಿದ ಪ್ರದೇಶ. ಶರಾವತಿ ಪ್ರದೇಶ, ಅಲ್ಲಿ ರೋಗ ಇದೆ, ಅಲ್ಲಿ ಡಾಕ್ಟರುಗಳು ಇಲ್ಲದೇ ಹೋದರೆ ಬಹಳ ಕಷ್ಟ ಇದೆ ಇಪ್ಪೊತ್ತು ಶರಾವತಿ ಮುಳುಗಡೆ ಪ್ರದೇಶದ ಕಡೆ ಮಾನ್ಯ ಆರೋಗ್ಯ ಮಂತ್ರಿಗಳು ಗಮನಹರಿಸಬೇಕು. ಇಪ್ಪೊತ್ತು ಆರಳಗೋಡಿಗೆ ಡಾಕ್ಟರನ್ನು ಕೊಡಬೇಕು.

ಶ್ರೀ ಎಂ. ಮಲ್ಲಪ್ಪ.—ಸ್ವಾಮಿ, ತಮ್ಮ ಕ್ಷೇತ್ರವನ್ನು ಹಿಂದುಳಿದಿದೆ ಎಂದು ನಾನು ತಿಳಿದು ಕೊಂಡಿಲ್ಲ ಅಲ್ಲಿಗೆ ಬೇಕಾದಷ್ಟು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೇವೆ. ಸಾಂಕ್ರಾಮಿಕ ರೋಗಗಳು ಗಣನೀಯವಾದ ಪ್ರಮಾಣದಲ್ಲಿ ಕಡಿಮೆಯಾಗಿದೆ ಅಂದಮೇಲೆ ಸೌಲಭ್ಯ ಹೆಚ್ಚು ಕೊಟ್ಟಿದ್ದೇವೆ ಎನ್ನುವ ಬಗ್ಗೆ ತಾವು ಒಪ್ಪಿಕೊಳ್ಳಲೇ ಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಸ್ವಾಮಿ, ಪಬ್ಲಿಕ್ ಸರ್ವೀಸ್ ಕಮಿಷನ್ನಿಂದ ೩೦೦ ಜನ ಸೆಲೆಕ್ಟ್ ಮಾಡಿದ್ದಾರೆಂದು ಹೇಳಿದರು. ಈಗ ಲೋಕಲ್ ಕ್ಯಾಂಡಿಡೇಟ್ಸ್ ನೇಮಕ ಮಾಡುತ್ತಿದ್ದಾರೆ ಇಪ್ಪೊತ್ತು ಮೆಡಿಕಲ್ ಗ್ರಾಜ್ಯುಯೇಟ್ಸ್ ಅನ್‌ಎಂಪ್ಲಾಯ್ಡ್ ಆಗಿದ್ದಾರೆ ಪಬ್ಲಿಕ್ ಸರ್ವೀಸ್ ಕಮಿಷನ್ನಿಂದ ಸೆಲೆಕ್ಟ್ ಆಗಿ ಬರತಕ್ಕದ್ದು ತಡವಾಗುತ್ತದೆ. ಆದುದರಿಂದ ಎಲ್ಲಾ ಕಡೆ ಲೋಕಲ್ ಕ್ಯಾಂಡಿಡೇಟ್ಸ್ ಫಿಲ್ ಆಪ್ ಮಾಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಪ್ಪ.—ಈಗ ಲೋಕಲ್ ಕ್ಯಾಂಡಿಡೇಟ್ಸ್ ಏನು ನೇಮಕ ಮಾಡಿದ್ದೇವೆ ಆದರಲ್ಲಿ ಕೆಲವರು ಪಬ್ಲಿಕ್ ಸರ್ವೀಸ್ ಕಮಿಷನ್ನಿಂದ ಬರುತ್ತಾರೆ. ಅಂತಹ ಅಗತ್ಯವಿದೆ ಎನ್ನುವುದು ಕಂಡು ಬಂದರೆ ಸ್ಥಳೀಯ ಅಭ್ಯರ್ಥಿಗಳನ್ನು ತೆಗೆದುಕೊಳ್ಳುತ್ತೇವೆ. ಒಂದು ವರ್ಷದಿಂದ ೩೦೦ ಜನ ಸ್ಥಳೀಯ ಅಭ್ಯರ್ಥಿಗಳ ಮೂಲಕ ಈ ಸ್ಥಾನಗಳನ್ನು ಭರ್ತಿ ಮಾಡಲಾಗಿದೆ.

Claims for Compensation under workmen's Compensation Act

413 SRI B.V. KAKKILAYA (Vittal).—Will the Minister for Labour & Excise be pleased to state :—

(a) the number of claims for Compensation under Workmen's Compensation Act pending before the Asst. Commissioner, South Kanara District at the end of March 1977 ;

(b) the Number of such claims (i) enquired (ii) disposed awarding compensation, and (iii) rejected, in the year ending 31st March 1978 ;

(c) the Number of such claims preferred by workmen in the year ending 31st March 1978 and the toral number of claims pending (i) enquiry and (ii) disposal at the end of March 1978 ;

(d) the number of cases at the end of March 1978 in which the amount of compensation awarded had not actually been paid and the number of such cases in which proceedings for recovery of the amo

unts as arrears of land revenue have been instituted in 1976-77 and 1977-78 ;

(e) the number of cases in which recovery have been made in 1976-77 and 1977-78 ;

(f) have the Government received any complaints regarding (i) delay in enquiring into and disposing of claims for compensation by workmen, and (ii) delay in or failure to recover the amounts due to workmen ;

(g) if the answer to (f) is in the affirmative what are the actions taken ?

SRI R.S. PATIL (Minister for Labour and Excise).—

(a) 106.

(b) (i) 32.

(ii) 17.

(iii) 6.

(c) Number of claims preferred is 30.

(i) 28 pending enquiry.

(ii) One case pending disposal.

(d) Nil.

(e) Nil.

(f) No.

(g) Does not arise

ಶ್ರೀ ಬಿ.ವಿ. ಕಕ್ಕೇರಿ.—ಅಧ್ಯಕ್ಷರೆ, ನಾನು ಈ ಪ್ರಶ್ನೆಯನ್ನು ಇಡೀ ರಾಜ್ಯದ ಬಗ್ಗೆ ಕೇಳಿದ್ದೆ, ಇದರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಎಂದು ಆಗಿದೆ. ಈಗ ೧೯೭೭ರ ಕೊನೆಯತನಕ ಪೆಂಡಿಂಗ್ ೩೨ ಕೇಸುಗಳು ತನಿಖೆಯಾಗಿರುವುದು ೧೭ ಕೇಸುಗಳು, ತೀರ್ಮಾನವಾಗಿರುವುದು ೬ ಕೇಸುಗಳು ಎಂದು ತಮ್ಮ ಉತ್ತರದಲ್ಲಿ ಇದೆ. ಅನಂತರ ತಮ್ಮ ಉತ್ತರದಲ್ಲಿ ೩೦ ಕೇಸುಗಳು ೧೯೭೮ ರಲ್ಲಿ ಬಂದಿವೆ ಎಂದು ಹೇಳಿದ್ದೀರಿ. ಇದರಲ್ಲಿ ೨೮ ಕೇಸುಗಳು ಪೆಂಡಿಂಗ್ ಎನ್‌ಕ್ವೈರಿ ಇದೆ, ಒಂದು ಕೇಸು ಪೆಂಡಿಂಗ್ ಡಿಸ್‌ಪೋಸಲ್ ಎಂದು ಇದೆ. ಇದನ್ನು ನೋಡಿದರೆ ೧೦೬ ಕೇಸುಗಳಲ್ಲಿ ೩೨ ಪೆಂಡಿಂಗ್ ಎನ್‌ಕ್ವೈರಿ, ೧೭ ಪೆಂಡಿಂಗ್ ಡಿಸ್‌ಪೋಸಲ್, ೬ ಮಾತ್ರ ತೀರ್ಮಾನವಾಗಿದೆ. ಅನಂತರ ಈ ವರ್ಷದಲ್ಲಿ ೩೦ ರಲ್ಲಿ ೨೮ ಪೆಂಡಿಂಗ್ ಎನ ಕ್ವೈರಿ, ಒಂದು ಪೆಂಡಿಂಗ್ ಡಿಸ್‌ಪೋಸಲ್ ಆಗಿದೆ ಎಂದರೆ ಇನ್ನು ಒಂದು ಕೇಸು ಮಾತ್ರ ತೀರ್ಮಾನವಾಗಿದೆ ಎಂದು ಊಹಿಸಿಕೊಳ್ಳಬೇಕು. ಯಾರು ಕೈ ಕಾಲು ಕಳೆದುಕೊಂಡಿರುತ್ತಾರೆ ಅವರ ಕೇಸುಗಳನ್ನು ವರ್ಷಾನುಗಟ್ಟಲೆ ಏನು ಪೆಂಡಿಂಗ್ ಇಟ್ಟಿರುತ್ತಾರೆ ಅವುಗಳನ್ನು ಬೇಗ ತೀರ್ಮಾನ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

†ಶ್ರೀ ಆರ್.ಎಸ್. ಪಾಟೀಲ್.—ಮೊದಲನೆಯದಾಗಿ ಅವರು ತಮ್ಮ ಪ್ರಶ್ನೆಯನ್ನು ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಕೇಳಿಲ್ಲ. ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಸಂಬಂಧಪಟ್ಟಂತೆ ಕೇಳಿದ್ದಾರೆ. ಇನ್ನು ಈ ಕೇಸುಗಳ ಬಗ್ಗೆ ೧೯೭೬-೭೭, ೧೯೭೭-೭೮ರ ವರೆಗೆ ೧೦೬ ಕ್ಲೈಮ್ಸ್ ಬಂದಿದೆ. ಅದರಲ್ಲಿ ೩೨ ಕೇಸುಗಳನ್ನು ಎನ್‌ಕ್ವೈರಿಗೆ ತೆಗೆದುಕೊಂಡಿದ್ದಾರೆ. ಬಹಳ ಕೇಸುಗಳು ಪೆಂಡಿಂಗ್ ಇದೆ ಎನ್ನುವುದನ್ನು ನಾನೂ ಒಪ್ಪುತ್ತೇನೆ. ಆದುದರಿಂದ ಅದಕ್ಕೆ ಬದಲು ವ್ಯವಸ್ಥೆ ಮಾಡಿದ್ದೇವೆ. ಈ ಕಾಂಪನ್

ಸೇಷನ್ ತೀರ್ಮಾನ ಮಾಡತಕ್ಕ ಅಧಿಕಾರ ಲೇಬರ್ ಡಿಪಾರ್ಟ್‌ಮೆಂಟಿಗೆ ಇದ್ದರೆ ಸೂಕ್ತ, ಬೇಗ ಇತ್ಯರ್ಥ ಮಾಡಲಿಕ್ಕೆ ಅವಕಾಶವಾಗುತ್ತದೆ. ರೆವಿನ್ಯೂ ಇನ್ಸ್‌ಪೆಕ್ಟರ್ ಅವರಿಗೆ ಬಹಳ ಜವಾಬ್ದಾರಿ ಇರುವುದರಿಂದ ಎಲ್ಲಾ ಕೆಲಸಕಾರ್ಯಗಳನ್ನು ಅವರಿಗೆ ಒಪ್ಪಿಸಿರುವುದರಿಂದ ಈ ಕಾರ್ಯದ ಕಡೆಗೆ ಗಮನ ಹರಿಸುವುದಕ್ಕೆ ಅಷ್ಟೊಂದು ಸಮಯ ಸಿಕ್ಕಿಲ್ಲ. ಅವರಿಗೆ ಆಪ್ರೋಚ್ ಬೇರೆ ಇರುತ್ತದೆ. ಈ ಆಸ್ಪೆಕ್ಟ್ ಎಲ್ಲಾ ಗಮನದಲ್ಲಿಟ್ಟುಕೊಂಡು ಲೇಬರ್ ಇಲಾಖೆಗೆ ವಹಿಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ ಇನ್ನು ಸ್ವಲ್ಪ ದಿವಸದಲ್ಲಿಯೇ ನೋಟೀಫಿಕೇಷನ್ ಆಗುತ್ತದೆ.

ಶ್ರೀ ಬಿ.ವಿ. ಕಕಿಲಾಯ.—ಸ್ವಾಮಿ, ಇದರ ಬಗ್ಗೆ ದೂರುಗಳು ಬಂದಿಲ್ಲ ಎಂದು ಹೇಳುತ್ತೀರಿ. ಬಡ್ಜೆಟ್ ಚರ್ಚೆ ನಡೆಸುತ್ತಿರುವಾಗ ಇಲ್ಲಿಯೇ ಒಂದು ತಮಗೆ ಕಳುಹಿಸಿಕೊಟ್ಟಿದ್ದೆ, ಅದು ಇನ್ನೂ ತೀರ್ಮಾನವಾಗಿಲ್ಲ. ಒಮ್ಮೆ ಆರ್ಡರ್ಸ್‌ಗೆ ಪೋಸ್ಟ್ ಮಾಡಿದ್ದನ್ನು ಮತ್ತೆ ತಿರುಗ ತನಿಖೆ ಶುರು ಮಾಡಿ ಮೂರು ನಾಲ್ಕು ತಿಂಗಳ ಕಾಲ ಕೇಸನ್ನು ತಡೆಹಿಡಿದಿದ್ದಾರೆ. ಇನ್ನು ಮಂಗಳೂರಿನಲ್ಲಿ ಆಕ್ಸಿಡೆಂಟ್ ಆಗಿ ಸತ್ತು ಹೋಗಿರುವುದರ ಬಗ್ಗೆ ೬ ವರ್ಷದಿಂದ ತೀರ್ಮಾನವಾಗಿಲ್ಲ ಎಂದು ತಮ್ಮ ಗಮನಕ್ಕೆ ತಂದಿದ್ದೆ. ಈ ಕೇಸುಗಳ ಬಗ್ಗೆ ಅಧಿಕಾರಿಗಳ ಗಮನ ಸಾಲದು. ಬಹಳ ಕಾಲ ತಡವಾಗಿದೆ. ಆದುದರಿಂದ ಇದರ ಬಗ್ಗೆ ಕೂಡಲೇ ತೀರ್ಮಾನ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್.ಎಸ್. ಪಾಟೀಲ್.—ಈಗ ತಾವು ಕೈ ಬಿಟ್ಟು ಹೋದಂತಹ ಕೇಸನ್ನು ತಾವು ಗಮನಕ್ಕೆ ತಂದಿದೀರಿ, ಆದರೆ ಸಂಬಂಧಪಟ್ಟವರು ಗಮನಕ್ಕೆ ತಂದಿಲ್ಲ ಎಂದು ಹೇಳಿದ್ದಾರೆ. ಈಗ ೧೦೬ ಜನ ಕ್ಲೈಮ್ಸ್ ಮಾಡಿದ್ದಾರೆ ಅವರು ಏನೂ ಕಂಪ್ಲೇಂಟ್ ಮಾಡಿಲ್ಲ. ಈಗ ತಾವು ಬಡ್ಜೆಟ್ ಸೆಷನ್‌ನಲ್ಲಿ ಹೇಳಿದ ಕೈ ಬಿಟ್ಟು ಹೋದಂತಹ ಕೇಸ್ ಗಮನಕ್ಕೆ ತಂದಿದ್ದೀರಿ, ಅದನ್ನು ನಾನು ನೋಡಿಸುತ್ತೇನೆ. ಇನ್ನೊಂದು ವಿಷಯದ ಬಗ್ಗೆ ತಾವು ಹೆಸರು ಕಳುಹಿಸಿಕೊಟ್ಟರೆ ಅದನ್ನು ನಾನು ಪರಿಶೀಲಿಸುತ್ತೇನೆ. ಇನ್ನುಮೇಲೆ ಲೇಬರ್ ಇಲಾಖೆಗೆ ಈ ಕ್ಲೈಮ್ಸ್ ಕೇಸ್ ಬಂದಿರುವುದರಿಂದ ಇಲ್ಲಿಯವರೆಗೆ ಅದಂತಹ ವಿಳಂಬ ಇನ್ನು ಮೇಲೆ ಆಗುವುದಿಲ್ಲ ಎಂದು ಹೇಳುತ್ತೇನೆ.

Interruption in power supply in some villages of Chikkodi Taluk, Belgaum District.

675 SRI A. B. BEDAGI (Sadalga).—Will the Minister of State for Information and Youth Services be pleased to state : —

(a) whether it has come to the notice of the Government that loss to the tune of lakhs of rupees has been caused to the people due to non-supply of electricity to the electrical pumpsets and other machineries in industries in the Villages of Akkola, Bedadihal, Bhoja, Shamaneladi, Sadalga, Yeshasamba, Nippani, Chikkodi, Boragaum and other big villages in Chikkodi taluk, Belgaum District?

(b) if so, the action intended to be taken by the Government ?

SRI K. H. SRINIVAS (Minister of State for Information and Youth Services)

(a) Interruptions in power supply are due to loadshedding that is being resorted to throughout the State due to shortage of peaking power. Every feeder is interrupted once in a week.

(b) Apart from augmenting power availability through new schemes coming into operation in 1979 and through additional imports the following works are proposed to be taken up to provide uninterrupted power supply.